ರೂಪಣಾತ್ಮಕ ಮೌಲ್ಯಮಾಪನ – 1 – ಸಾಧನಾ ಪರೀಕ್ಷೆ – 1 (ಮಾದರಿ ಉತ್ತರ)

ಸಮಯ : 40 ನಿಮಿಷಗಳು **10 ನೇ ತರಗತಿ ಪ್ರಥಮ ಭಾಷೆ ಕನ್ನಡ.** ಗರಿಷ್ಠ ಅಂಕಗಳು : **20**

**ಕೊಟ್ಟಿರುವ ಪ್ರತಿಯೊಂದು ಹೇಳಿಕೆಗೂ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ಸರಿ ಉತ್ತರವನ್ನು ಆರಿಸಿ ಬರೆಯಿರಿ. 1*3=3**

1. 'ಪೆರ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
ಎ) ತತ್ಪುರುಷ ಬಿ) ಕರ್ಮಧಾರಯ ಸಿ) ದ್ವಿಗು ಡಿ) ದ್ವಂದ್ವ **ಉತ್ತರ : ಬಿ) ಕರ್ಮಧಾರಯ**
2. ಇವುಗಳಲ್ಲಿ ಅವರ್ಗೀಯ ವ್ಯಂಜನಾಕ್ಷರಗಳಿಂದ ಕೂಡಿದ ಪದ;
ಎ) ಹವಳ ಬಿ) ಕಥನ ಸಿ) ಜನಕ ಡಿ) ಗಮನ **ಉತ್ತರ : ಎ) ಹವಳ**
3. 'ಹೊಸಗಾಲ' ಪದದಲ್ಲಿ ಆಗಿರುವ ಸಂಧಿ;
ಎ) ಲೋಪ ಬಿ) ಆದೇಶ ಸಿ) ಆಗಮ ಡಿ) ಪ್ರಕೃತಿಭಾವ **ಉತ್ತರ : ಬಿ) ಆದೇಶ**

**ಕೊಟ್ಟಿರುವ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದವನ್ನು ಬರೆಯಿರಿ. 1*3=3**

4. ಹಾಲ್ಜೇನು : ಜೋಡುನುಡಿ : : ಬಟ್ಟಬಯಲು : **ದ್ವಿರುಕ್ತಿ.**
5. ಹಕ್ಕಿ : ತದ್ಭವ : : ಪಕ್ಷಿ : **ತತ್ಸಮ.**
6. ಅರಸುಗಳ್ಗೆ : ಚತುರ್ಥಿ ವಿಭಕ್ತಿ : : ಅರ್ಥಶಾಸ್ತ್ರದೊಳ್ : **ಸಪ್ತಮಿ ವಿಭಕ್ತಿ**

**ಕೊಟ್ಟಿರುವ ಪ್ರತಿಪ್ರಶ್ನೆಗೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿ. 1*3= 3**

**7. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು?**
ಶ್ರೀರಾಮನಿಗೆ ಸಮರ್ಪಿಸಲು ಶಬರಿ **ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣುಹಂಪಲುಗಳನ್ನು** ಸಂಗ್ರಹಿಸಿದ್ದಳು.

**8. ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ತಿಳಿದುಕೊಂಡಿರುವ ಅಂಶಗಳು ಯಾವುವು?**
ಪಾಶ್ಚಾತ್ಯರಲ್ಲಿ ಮಕ್ಕಳಾದಿಯಾಗಿ ಎಲ್ಲರೂ ಯಾಂತ್ರೀಕರಣ, ವಿದ್ಯುದೀಕರಣ, ಔದ್ಯೋಗೀಕರಣ, ಅಣುಶಕ್ತಿ ಇವುಗಳಿಂದ ಆಗುವ ಉಪಯೋಗ, ಬಳಸುವ ವಿಧಾನ ಹಾಗೂ ಹಾನಿಗಳ ಬಗ್ಗೆ ತಕ್ಕಮಟ್ಟಿನ ಜ್ಞಾನವನ್ನು ಪಡೆದುಕೊಂಡಿರುತ್ತಾರೆ.

9. ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಯಾವುದರ ಬಗ್ಗೆ ಚರ್ಚಿಸಬೇಕು ಎಂದು ಎಚ್. ನರಸಿಂಹಯ್ಯ ಅಭಿಪ್ರಾಯಪಡುತ್ತಾರೆ?
ವಿಜ್ಞಾನದ ಸಭೆ, ಸಮ್ಮೇಳನಗಳಲ್ಲಿ ಪವಾಡ, ಮೂಢನಂಬಿಕೆ, ಮಾಟಮಂತ್ರ ಮುಂತಾದುವುಗಳ ಬಗ್ಗೆ ಚರ್ಚಿಸಬೇಕು ಎಂದು ಎಚ್. ನರಸಿಂಹಯ್ಯ ಅಭಿಪ್ರಾಯಪಡುತ್ತಾರೆ?

**ಕೊಟ್ಟಿರುವ ಪ್ರತಿಪ್ರಶ್ನೆಗೂ ಮೂರು / ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ. 2*4=08**

10. ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಕಾಲ, ಸ್ಥಳ, ಒಂದು ಕೃತಿ ಹಾಗೂ ಸಂದ ಒಂದು ಪ್ರಶಸ್ತಿ ತಿಳಿಸಿ, ವಾಕ್ಯರೂಪದಲ್ಲಿ ಟಿಪ್ಪಣಿ ಬರೆಯಿರಿ.
ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರು **ಕ್ರಿ. ಶ. 1904ರಲ್ಲಿ** ಹಾಸನ ಜಿಲ್ಲೆಯ **ಗೊರೂರು** ಗ್ರಾಮದಲ್ಲಿ ಜನಿಸಿದರು. ಕನ್ನಡ ನವೋದಯ ಕಾಲದ ಗದ್ಯಪ್ರಕಾರದ ಪ್ರಮುಖ ಲೇಖಕರಾದ ಇವರು **ಅಮೆರಿಕದಲ್ಲಿ ಗೊರೂರು (ಪ್ರವಾಸ ಕಥನ)**, ನಮ್ಮ ಊರಿನ ರಸಿಕರು, ಗರುಡಗಂಬದ ದಾಸಯ್ಯ, ಮೆರವಣಿಗೆ, ಹೇಮಾವತಿ ತೀರದಲ್ಲಿ, ಪುನರ್ಜನ್ಮ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಗೌರವ ಡಿ. ಲಿಟ್ ಪದವಿಗಳನ್ನು ನೀಡಿ ಗೌರವಿಸಲಾಗಿದೆ.

11. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು?
ರಾಮನು ಗಿರಿವನಗಳನ್ನು ಕುರಿತು "ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು. ಹೇಳಿರಿ, ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

12. ಹೊಸಗಾಲದ ಹಸುಮಕ್ಕಳನ್ನು ಹಕ್ಕಿ ಹೇಗೆ ಹರಸಿದೆ?
ಹಕ್ಕಿಯು (ಕಾಲಪಕ್ಷಿಯು) ಯುಗಯುಗಗಳ ಆಗುಹೋಗುಗಳನ್ನು ಹಿಂದಕ್ಕೆ ತಳ್ಳುತ್ತ, ಹೊಸ ಮನ್ವಂತರದ ಪರಿವರ್ತನೆಗೆ / ಪ್ರಗತಿಗೆ ಕಾರಣವಾಗಿದೆ. ಹಕ್ಕಿಯು (ಕಾಲಪಕ್ಷಿಯು) ತನ್ನ ಹಗಲು ರಾತ್ರಿಗಳೆಂಬ ರೆಕ್ಕೆಗಳನ್ನು ಬೀಸುವ ಮೂಲಕ ಭೂಮಂಡಲದ ಜೀವಿಗಳಿಗೆ ಚೈತನ್ಯ ನೀಡಿ, ಹೊಸಗಾಲದ ಹಸುಮಕ್ಕಳನ್ನು ಹರಸಿ, ಉತ್ತಮ ಭವಿಷ್ಯಕ್ಕಾಗಿ ಶುಭ ಹಾರೈಸುತ್ತಿದೆ ಎಂದು ಕವಿಗಳು ವರ್ಣಿಸುತ್ತಾರೆ.

**13. ಈ ಪದ್ಯಭಾಗವನ್ನು ಪೂರ್ಣಗೊಳಿಸಿ.**
ನೀಲಮೇಘ ಮಂಡಲ – ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯ ಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**14. "ಎನಗಂ ಪಾಂಡುಗಮಿಲ್ಲ ಭೇದಂ" ಈ ಹೇಳಿಕೆಯ ಸಂದರ್ಭ ತಿಳಿಸಿ, ಸ್ವಾರಸ್ಯ ಬರೆಯಿರಿ. 1*3=3**

**ಆಯ್ಕೆ :** ಈ ವಾಕ್ಯವನ್ನು ಆದಿ ಮಹಾಕವಿ ಪಂಪನು ರಚಿಸಿರುವ **'ವಿಕ್ರಮಾರ್ಜುನ ವಿಜಯ'** ಕೃತಿಯಿಂದ ಆಯ್ದ **'ಎಮ್ಮ ನುಡಿಗೇಳ್'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ :** ದುರ್ಯೋಧನನು ತನ್ನ ಬಳಿಗೆ ಬಂದ ಮಾತಾಪಿತೃಗಳಿಗೆ (ಧೃತರಾಷ್ಟ್ರ ಮತ್ತು ಗಾಂಧಾರಿ) ವಿನಯದಿಂದ ನಮಸ್ಕರಿಸಿ ತಲೆಬಾಗಿದ ಸಂದರ್ಭದಲ್ಲಿ ದುರ್ಯೋಧನನಿಗೆ ಧೃತರಾಷ್ಟ್ರನು ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ :** ಧೃತರಾಷ್ಟ್ರನು ದುರ್ಯೋಧನನ್ನು ಕುರಿತು "ನನಗೂ ಪಾಂಡುವಿಗೂ ಭೇದವಿಲ್ಲ. ರಾಜ್ಯವನ್ನು ವಿಭಾಗ ಮಾಡಿ ಆಳೋಣ. ಸಂಧಿಯನ್ನು ಮಾಡೋಣ" ಎಂದು ಸ್ವಾರಸ್ಯಪೂರ್ಣವಾಗಿ ಹೇಳುತ್ತಾನೆ.